# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
## ಮಾದರಿ ಪ್ರಶ್ನೆ ಪತ್ರಿಕೆ: 2018–19

## ವಿಷಯ: ಸಮಾಜ ವಿಜ್ಞಾನ–85K

**ಸಮಯ: 3 ಗಂಟೆ** **ಗರಿಷ್ಠ ಅಂಕಗಳು : 100**

---

**I ನಾಲ್ಕು ಪರ್ಯಾಯಗಳನ್ನು ಪ್ರತಿ ಹೇಳಿಕೆಗಳು ಅಥವಾ ಅಪೂರ್ಣ ವಾಕ್ಯಗಳಿಗೆ ನೀಡಲಾಗಿದೆ. ಅವುಗಳಲ್ಲಿ ಒಂದು ಸರಿಯಾದ ಉತ್ತರವಾಗಿದೆ. ಆ ಉತ್ತರವನ್ನು ಆರಿಸಿ ನಿಮ್ಮ ಉತ್ತರ ಪತ್ರಿಕೆಗಳಲ್ಲಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ.** **10x1=10**

1. ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮೂಲರಾಜ್ ಆಂಗ್ಲರ ವಿರುದ್ಧ ಪ್ರತಿಭಟಿಸಲು ಕಾರಣ
   ಎ) ಆಂಗ್ಲರು ಪಂಜಾಬಿನ ಮೇಲೆ ನೇರ ಆಳ್ವಿಕೆ ಹೇರಲು ಮುಂದಾದರು
   ಬಿ) ಆಂಗ್ಲರು ದುಲೀಪ್ ಸಿಂಗ್‌ನು ಪಂಜಾಬನನ್ನು ಆಳಲು ಬಿಟ್ಟರು
   ಸಿ) ಆಂಗ್ಲರು ದುಲೀಪ್ ಸಿಂಗ್‌ಗೆ ನಿವೃತ್ತಿ ನೀಡಿದರು
   ಡಿ) ಆಂಗ್ಲರು ನಿರಂತರ ಮೈತ್ರಿ ಒಪ್ಪಂದವನ್ನು ಉಲ್ಲಂಘಿಸಿದರು

2. ಬಾಲಗಂಗಾಧರ್ ತಿಲಕ್‌ರವರ ಕೃತಿ
   ಎ) ಕೇಸರಿ ಬಿ) ಮರಾಠ ಸಿ) ಗೀತಾರಹಸ್ಯ ಡಿ) ಗೀತಾಂಮೃತಸಾರ

3. ಶೀಥಲ ಸಮರ ಕೊನೆಗೊಂಡುದರ ಪರಿಣಾಮ
   ಎ) ಅಮೇರಿಕ ಸಂಯುಕ್ತ ಸಂಸ್ಥಾನ ಏಕಮೇವ ಬಲಿಷ್ಠರಾಷ್ಟ್ರವಾಗಿ ಬೆಳೆಯಿತು
   ಬಿ) ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರಗಳಲ್ಲಿ ದುಡಿಯಲು ಪ್ರೋತ್ಸಾಹ ದೊರಕಿತು.
   ಸಿ) ಅಮೇರಿಕ ಸಂಯುಕ್ತ ಸಂಸ್ಥಾನ ವಿಶ್ವ ಸಂಸ್ಥೆಯ ಸ್ಥಾಪನೆಗೆ ಸಹಕರಿಸಿತು.
   ಡಿ) ಹಿರೋಷಿಮ ಮತ್ತು ನಾಗಸಾಕಿಯ ಮೇಲೆ ಅಮೇರಿಕ ಅಣುಬಾಂಬ್ ಹಾಕಿತು.

4. ನಮ್ಮ ದೇಶದ ವಿದೇಶಾಂಗ ನೀತಿಯನ್ನು ಸುಧಾರಿಸಿ ಪಾಕಿಸ್ತಾನದೊಂದಿಗೆ ಮೈತ್ರಿ ಬಾಂಧವ್ಯಕ್ಕೆ ಪ್ರಯತ್ನಿಸಿದವರು
   ಎ) ಇಂದಿರಾ ಗಾಂಧಿ ಬಿ) ಜವಹರಲಾಲ್ ನೆಹರು ಸಿ) ಲಾಲ್ ಬಹದ್ದೂರ್ ಶಾಸ್ತ್ರಿ ಡಿ) ಎ.ಬಿ.ವಾಜಪೇಯಿ

5. ವಿಶ್ವ ವ್ಯಾಪಾರ ಸಂಘವು ವಿಶ್ವ ವ್ಯಾ[ಆರದ ಮೂರನೆ ಆಧಾರ ಸ್ತ ಂಭವಾದರೆ ಮೊದಲೆರಡು ಸ್ತಂಬಗಳು
   ಎ) ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಮತ್ತು ಐ ಎಮ್ ಎಫ್ ಸಿ) ಎಫ್.ಎ.ಓ ಮತ್ತು ವಿಶ್ವ ಆರೋಗ್ಯ ಸಂಸ್ಥೆ
   ಬಿ) ಯುನೆಸ್ಕೋ ಮತ್ತು ಯುನಿಸೆಫ್ ಡಿ) ಐ ಎಮ್ ಫ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆ

6. ಕುಸುವ ಸೊರಬ ಈ ಚಳುವಳಿಯಲ್ಲಿ ತಮ್ಮ ಜೀವ ಕಳೆದುಕೊಂಡರು
   ಎ) ಚಿಪ್ಕೊ ಚಳುವಳಿ ಸಿ) ಮದ್ಯಪಾನ ನಿಷೇಧ ಚಳುವಳಿ
   ಬಿ) ಮೌನ ಕಣಿವೆ ಚಳುವಳಿ ಡಿ) ಅಸ್ಪೃಶ್ಯತೆ ಆಚರಣೆ ವಿರೋಧಿ ಚಳುವಳಿ

7. ನೀರಾವರಿ ಬೇಸಾಯವು ಭಾರತದ ಪಶ್ಚಿಮ ಕರಾವಳಿಯ ಉದ್ದಕ್ಕೂನತಿ ಕಡಿಮೆ ಕಂಡುಬರುತ್ತದೆ. ಕಾರಣ
   ಎ) ಇವರೆಲ್ಲರು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ ಸಿ) ಇಲ್ಲಿ ಲ್ಯಾಟಿರೈಟ್ ಮಣ್ಣು ಹೆಚ್ಚಾಗಿ ಕಂಡು ಬರುತ್ತದೆ
   ಬಿ) ಇಲ್ಲಿ ಸಾಕಷ್ಟು ಮಳೆ ಬೀಳುವ ಪ್ರದೇಶವಾಗಿದೆ ಡಿ) ಇಲ್ಲಿ ಹೆಚ್ಚು ಕಾಡು ಕಂಡುಬರುತ್ತದೆ

8. ಇತ್ತೀಚೆಗೆ ಭಾರತದ ಅಭ್ರಕಾದ ರಫ್ತು ಪ್ರಮಾಣವು ಕಡಿಮೆಯಾಗಲು ಕಾರಣ
   ಎ) ಹಲವು ರಾಷ್ಟ್ರಗಳು ಕೃತಕ ಅಭ್ರಕವನ್ನು ಉತ್ಪಾದಿಸುತ್ತಿವೆ ಸಿ) ಅಭ್ರಕದ ನಿಕ್ಷೇಪಗಳು ಬರಿದಾಗುತ್ತಿವೆ
   ಬಿ) ಅಭ್ರಕವನ್ನು ಚೀನಾ ಕೂಡ ಉತ್ಪಾದಿಸುತ್ತಿದೆ ಡಿ) ಭಾರತ ಅಭ್ರಕವನ್ನು ಉತ್ಪಾದಿಸುತ್ತಿಲ್ಲ

9. ದೇಶಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದ ಸಂವಿಧಾನದ ತಿದ್ದುಪಡಿ
   ಎ) 78ನೇ ತಿದ್ದುಪಡಿ ಬಿ) 73ನೇ ತಿದ್ದುಪಡಿ ಸಿ) 72ನೇ ತಿದ್ದುಪಡಿ ಡಿ) 70ನೇ ತಿದ್ದುಪಡಿ

**ಪು.ತಿ.ನೋ**

10. ಜಾಗತೀಕರಣದ ಪರಿಣಾಮವಾಗಿ ಪ್ರಪಂಚದ ದೇಶಗಳ ಮದ್ಯ ನಿಕಟ ಸಂಬಂಧ ಪರಸಪರ ಅನ್ಯೋನ್ಯತೆ ಉಂಟಾಗಿ ರೂಪುಗೊಂಡಿರುವುದು

ಎ) ಶಸ್ತ್ರಾಸ್ತ್ರ ಪೈಪೋಟಿ ಸಿ) ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು

ಬಿ) ಮಾನವ ಸಾಗಾಣಿಕೆ ತಡೆ ಡಿ) ಸೀಮಿತ ಬಂಡವಾಳದ ಹರಿವು

**II ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 14x1=14**


11. ವೆಲ್ಲಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಏಕೆ ಮರಳಿದನು?
12. ದಿವಾನಿ ಅದಾಲತ್‌ಗೂ ಮತ್ತು ಫೌಜ್‌ದಾರಿ ಅದಾಲತ್‌ಗೂ ಇರುವ ವ್ಯತ್ಯಾಸವೇನು?
13. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
14. 1857ರ ದಂಗೆಯಲ್ಲಿ ಸಿಪಾಯಿಗಳು ಜನರ ವಿಶ್ವಾಸ ಕಳೆದುಕೊಂಡರು ಏಕೆ?
15.  ಇವರು ಪ್ರತಿಪಾದಿಸಿದ್ದೇನು?
16. ಭಾರತ ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ. ಏಕೆ?
17. ಸಾಮಾಜಿಕ ಸ್ಥರವಿನ್ಯಾಸ ಎಂದರೇನು?
18. ಜನಮಂದೆ ಎಂದರೇನು?
19. ಆರ್ದ್ರ ಬೇಸಾಯ ಎಂದರೇನು?
20. ಮಾಹಿತಿ ತಂತ್ರಜ್ಞಾನ ಕೈಗಾರಿಕೆಯ ಅಂಗಭಾಗಗಳು ಯಾವುವು?
21. ಕಡಿಮೆ ಜನಸಾಂದ್ರತೆಯುಳ್ಳ ಭಾರತ ಕೇಂದ್ರಾಡಳಿತ ಪ್ರದೇಶ ಯಾವುದು?
22. ಜನಸಾಂದ್ರತೆ ಎಂದರೇನು?
23. ಭಾರತೀಯ ರಿಸರ್ವ್ ಬ್ಯಾಂಕ್ ರಾಷ್ಟ್ರೀಕರಣಗೊಂಡದ್ದು ಯಾವಾಗ?
24. ವಿಶ್ವವ್ಯಾಪಾರ ಸಂಘಟನೆಯ ಕೇಂದ್ರ ಕಚೇರಿ ಎಲ್ಲಿದೆ?

**III ಈ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 15x2=30**

25. ಕಾನ್ಸ್‌ಟ್ಯಾಂಟಿನೋಪಲ್‌ನ ಪತನ ಭಾರತಕ್ಕೆ ಹೊಸ ಜಲಮಾರ್ಗದ ಅನ್ವೇಷಣೆಗೆ ದಾರಿ ಮಾಡಿತು. ಹೇಗೆ? ವಿವರಿಸಿ.
26. ಬಿಳಿಯನ ಮೇಲಿನ ಹೊರೆ ಸಿದ್ದಾಂತದ ಪರಿಣಾಮವೇನು?
27. 1857ರ ದಂಗೆ ಆರಂಭಕ್ಕೆ ಬ್ಯಾರಕಪುರ ಹೇಗೆ ಕಾರಣವಾಯಿತು? ವಿವರಿಸಿ.
28. ಭಾರತದ ಒಕ್ಕುಟಕ್ಕೆ ಹಯದರಾಬಾದನ್ನು ಪಟೇಲರು ಹೇಗೆ ಸೇರ್ಪಡೆಗೊಳಿಸಿದರು? ವಿವರಿಸಿ.
29. ರಷ್ಯಾವನ್ನು ಸ್ಟಾಲಿನ್ ಹೇಗೆ ಅಭಿವೃದ್ಧಿಗೊಳಿಸಿದ?
30. ಭಾರತ ತನ್ನ ನೆರೆ ರಾಷ್ಟ್ರಗಳೊಂದಿಗಿನ ಸಂಬಂಧ ಉತ್ತಮಪಡಿಸಿಕೊಳ್ಳಲು ರಷ್ಯಾ ಹೇಗೆ ಸಹಕರಿಸಿದೆ?
31. ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾಗಿರಲು ಭಾರತ ರಚಿಸಿರುವ ಆಯೋಗಗಳಾವುವು?
32. ಹಸಿವಿನ ಸೂಚಕವನ್ನು ತಿಳಿಯಲು ಸಹಾಯವಾಗುವ ಅಂಶಗಳಾವುವು?
33. ಉತ್ತರದ ಮೈದಾನಗಳ ಪ್ರಾಮುಖ್ಯತೆಗಳೇನು?
34. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
35. ಭಾರತದಲ್ಲಿ ಕೈಗೊಂಡಿರುವ ಅರಣ್ಯ ಸಂರಕ್ಷಣಾ ಕ್ರಮಗಳಾವುವು?
36. ಈ ನದಿಗಳನ್ನು ಹಿಮಾಲಯದ ನದಿಗಳು ಮತ್ತು ಪರ್ಯಾಯ ಪ್ರಸ್ಥಭೂಮಿ ನದಿಗಳಾಗಿಯೂ ವಿಂಗಡಿಸಿ. ಅ) ಮಹಾನದಿ ಆ) ಸಟ್ಲೇಜ್ ಇ) ಕೂಸಿ ಈ) ಗಂಡಕ್
37. ಕೊಳವೆ ಮಾರ್ಗಗಳನ್ನು ವಿವರಿಸಿ.
38. ಒಳಗೊಳ್ಳುವ ಅಭಿವೃದ್ಧಿ ಮತ್ತು ನಿರಂತರ ಅಭಿವೃದ್ಧಿ ಎಂದರೇನು?
39. ಮಾರ್ಚ್ 15ರಂದು ವಿಶ್ವ ಗ್ರಾಹಕರ ದಿನಾಚಣೆ ಏಕೆ ಮಾಡಲಾಗುತ್ತದೆ?

**IV ಈ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 16x3=48**

40. ಪ್ಲಾಸಿ ಕದನದ ಪರಿಣಾಮಗಳೇನು?
41. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೈನಿಕ ಕಾರಣಗಳನ್ನು ತಿಳಿಸಿ.
42. ರಷ್ಯಾದ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ.
43. ಭಯೋತ್ಪಾದನೆಯ ನಿಗ್ರಹಕ್ಕೆ ಭಾರತ ಕೈಗೊಂಡಿರುವ ಕ್ರಮಗಳಾವುವು?
44. ಸಂಭಾವನೆ ರಹಿತ ಮತ್ತು ಸಂಭಾವನೆ ಸಹಿತ ದುಡಿಮೆಗಳಿಗೆ ಪ್ರತಿಯೊಂದಕ್ಕೂ ಎರಡು ಉದಾಹರಣೆ ಕೊಡಿ.
45. ಸಂಪರ್ಕ ಮಾಧ್ಯಮಗಳವಿಧಗಳನ್ನು ತಿಳಿಸಿ.

46  ನಕ್ಷೆಯಲ್ಲಿ ಗುರುತಿಸಿರುವ ಪ್ರದೇಶದ ಆರ್ಥಿಕ ಪ್ರಾಮುಖ್ಯತೆಯನ್ನು ಗುರುತಿಸಿ.

47 ಭೂಕುಸಿತಗಳಿಗೆ ಕಾರಣಗಳೇನು?

48 ಗ್ರಾಮೀಣಾಭಿವೃದ್ಧಿಯ ಮಹತ್ವವೇನು?

49 ಗ್ರಾಮೀಣ ನ್ಯಾಯಲಯಗಳ ಹಂತಗಳನ್ನು ತಿಳಿಸಿ.

**IV ಈ ಪ್ರಶ್ನೆಗಳಿಗೆ ಆರರಿಂದ ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 16x3=48**

50. ಬ್ರಿಟಿಷರ ಆಡಳಿತ ಕಾಲದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಬೆಳವಣಿಗೆಯನ್ನು ವಿವರಿಸಿ.

    ಅಥವಾ

    ಆಂಗ್ಲರ ವಿರುದ್ಧ ಸುರಪುರದ ದಂಗೆಯನ್ನು ವಿವರಿಸಿ.
51. ಭಯೋತ್ಪಾದನೆಯ ಪರಿಣಾಮಗಳನ್ನು ವಿವರಿಸಿ.

    ಅಥವಾ

    ವಿಶ್ವ ಸಂಸ್ಥೆಯ ಆರ್ಥಿಕ ಮತ್ತು ಹಣಕಾಸಿನ ಸಾಧನೆಗಳನ್ನು ವಿವರಿಸಿ.
52. ಅಸ್ಪೃಶ್ಯತೆಯ ಸಮಸ್ಯೆಗಳೇನು?

    ಅಥವಾ

    ಅಸಂಘಟಿತ ಕಾರ್ಮಿಕ ವರ್ಗದವರ ಸಮಸ್ಯೆ ಮತ್ತು ಸವಾಲುಗಳು ಯಾವುವು?
53. ಉತ್ತರ ಭಾರತದ ಪ್ರಾಂತ್ಯಗಳು ದಕ್ಷಿಣ ಭಾರತಕ್ಕೆ ಹೋಲಿಸಿದರೆ ಹೆಚ್ಚು ಪ್ರವಾಹಪೀಡಿತ ಪ್ರದೇಶಗಳನ್ನು ಹೊಂದಿದೆ. ಏಕೆ?

    ಅಥವಾ

    'ಪಶ್ಚಿಮ ಬಂಗಾಳ ಮತ್ತು ಒಡಿಷಾಗಳಲ್ಲೆ ಹೆಚ್ಚಿನ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಕೇಂದ್ರೀಕೃತವಾಗಿದೆ' ಏಕೆ?
54. ಆರ್ ಬಿ ಐ ನ ಕಾರ್ಯಗಳಾವುವು?

    ಅಥವಾ

    ಸರ್ಕಾರದ ತೆರಿಗೆಯೇತರ ಆದಾಯಗಳು ಯಾವುವು?
55. ಬ್ಯಾಂಕ್ ಖಾತೆಯನ್ನು ಹೊಂದುವುದರಿಂದ ಆಗುವ ಪ್ರಯೋಜನಗಳೇನು?

    ಅಥವಾ

    ಉದ್ದಿಮೆದಾರನ ಕಾರ್ಯಗಳೆನು?

**V ಈ ಪ್ರಶ್ನೆಗೆ ಉತ್ತರಿಸಿರಿ: 1x4=4**

56. ಅಸಹಾಯಕ ಚಳುವಳಿಯ ಪರಿಣಾಮಗಳೇನು?

**VI** 57. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ. **1x4=4**

ಅ) ಇಂದಿರಾ ಕೌಲ್ ಆ) ಇಂದಿರಾ ಪಾಯಿಂಟ್ ಇ) ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

* * * * *